ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

Government of Karnataka
Forest Department

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಕೊಡಗು ವೃತ್ತ, ಮಡಿಕೇರಿ-571201, ಕೊಡಗು ಜಿಲ್ಲೆ
OFFICE OF THE CHIEF CONSERVATOR OF FORESTS, KODAGU CIRCLE, MADIKERI-571201, KODAGU DISTRICT
Email:ccfkodagu@gmail.com ದೂರವಾಣಿ /Phone:08272-225708

---

ಸಂಖ್ಯೆ : ಸಿಬ್ಬಂದಿ/ಸಿಆರ್-22/ಆಕಾನೇಮಕಾತಿ/2018-19 ದಿನಾಂಕ : 25.02.2019

# ಅಧಿಕೃತ ಜ್ಞಾಪನಾ ಪತ್ರ

ವಿಷಯ: ಆನೆ ಕಾವಾಡಿಗ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ:1) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ಇವರ ಕಛೇರಿ ಪತ್ರ ಸಂಖ್ಯೆ ಬಿ3/ಸಿಬ್ಬಂದಿ/ಸಿಆರ್-140/2013-14 ದಿನಾಂಕ 05.11.2018.

2) ಈ ಕಛೇರಿಯಿಂದ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕ 01.12.2018

3) ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಡಿಕೇರಿ ಇವರ ಪತ್ರ ಸಂಖ್ಯೆ ಎ5/ಸಿಬ್ಬಂದಿ/ ವಿವ-5/ಆಕಾ/ನೇರ/2018-19 ದಿನಾಂಕ 31.01.2019.

4) ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಡಿಕೇರಿ ವಿಭಾಗ, ಮಡಿಕೇರಿ ಇವರ ಕಛೇರಿ ಪತ್ರ ಸಂಖ್ಯೆ ಎ5/ಸಿಬ್ಬಂದಿ/ವಿವ-5/2018-19 ದಿನಾಂಕ 16.02.2019.

5) ಈ ಕಛೇರಿಯಿಂದ ಅಧಿಸೂಚನೆಯನ್ನು (ಆಕ್ಷೇಪಣೆ ಇದ್ದಲ್ಲಿ) ಹೊರಡಿಸಿದ ದಿನಾಂಕ 18.02.2019.

*****

**ಪ್ರಸ್ತಾವನೆ :**

ಉಲ್ಲೇಖ (1) ರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ಇವರ ಸೂಚನೆಯಂತೆ ಈ ವೃತ್ತ ವ್ಯಾಪ್ತಿಯಲ್ಲಿ ಖಾಲಿ ಇರುವ 7 ಆನೆ ಕಾವಾಡಿಗ ಬ್ಯಾಕ್‌ಲಾಗ್ ಹುದ್ದೆಗಳಿಗೆ ನೇರ ನೇಮಕಾತಿ ಮುಖಾಂತರ ಆಯ್ಕೆ ಮಾಡಲು ಉಲ್ಲೇಖ (2) ರಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಸದರಿ ಆನೆ ಕಾವಾಡಿಗರ ಆಯ್ಕೆ ಪ್ರಕ್ರಿಯೆಯನ್ನು ನಡೆಸಲು ಆನೆ ಕಾವಾಡಿಗ ಆಯ್ಕೆ ಪ್ರಕ್ರಿಯೆ ಸಮಿತಿಯನ್ನು ಉಲ್ಲೇಖ (3) ರಂತೆ ರಚಿಸಲಾಗಿತ್ತು. ಅದರಂತೆ ಆಯ್ಕೆ ಪ್ರಕ್ರಿಯೆ ಸಮಿತಿಯು ದಿನಾಂಕ 04.02.2019 ರಂದು ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರಿಣಿತಿ, ದೈಹಿಕ ಸಾಮಾರ್ಥ್ಯ, ಆನೆ ಸಾಕಾಣಿಕೆಯ ಬಗ್ಗೆ ಪರಿಣಿತಿಯ ಬಗ್ಗೆ ಸಂದರ್ಶನ ನಡೆಸಿ ಸದರಿ ಅಭ್ಯರ್ಥಿಗಳಿಗೆ ಅಂಕವನ್ನು ನೀಡಿ ಅಭ್ಯರ್ಥಿಗಳ ಕ್ರೋಢೀಕೃತ ಪಟ್ಟಿಯನ್ನು ಉಲ್ಲೇಖ (4) ರ ಪತ್ರದಂತೆ ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಆಯ್ಕೆ ಪ್ರಕ್ರಿಯೆಯ ಸಮಿತಿಯು ಸಲ್ಲಿಸಿರುವ ಅಭ್ಯರ್ಥಿಗಳ ಕ್ರೋಢೀಕೃತ ಮೌಲ್ಯಮಾಪನಾ ಪಟ್ಟಿಯನ್ನು ಮತ್ತು ಇತರೆ ದಾಖಲೆಗಳನ್ನು ಪರಿಶೀಲಿಸಿ ಅಭ್ಯರ್ಥಿಗಳು ಪಡೆದ ಸರಾಸರಿ ಅಂಕಗಳು ಮತ್ತು ಮೀಸಲಾತಿಗಳನ್ವಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ದಿನಾಂಕ 18.02.2019 ರಂದು ಪ್ರಕಟಿಸಲಾಗಿರುತ್ತದೆ.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಯ ಬಗ್ಗೆ ಯಾವುದೇ ಆಕ್ಷೇಪಣೆಗಳು ಬಾರದೇ ಇರುವುದರಿಂದ ದಿನಾಂಕ 25.02.2019 ರಂದು ಅಂತಿಮ ಆಯ್ಕೆ ಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಒಟ್ಟು 37 ಅಭ್ಯರ್ಥಿಗಳು ಹಾಜರಾಗಿದ್ದು ಇದರಲ್ಲಿ ಆನೆ ನಿರ್ವಹಣೆ, ದೈಹಿಕ ಸಾಮಾರ್ಥ್ಯ ಪರಿಶೀಲನೆ ಹಾಗೂ ಮೂಲ ದಾಖಲೆಗಳ ಪರಿಶೀಲನೆಗನುಗುಣವಾಗಿ (ಕರ್ನಾಟಕ ರಾಜ್ಯ ವ್ಯಾಪ್ತಿಯ ಅಧಿಸೂಚಿತ ಅರಣ್ಯದೊಳಗೆ ವಾಸವಾಗಿರುವ ಬಗ್ಗೆ ಮತ್ತು ಆನೆ ನಿರ್ವಹಣೆಯ ಬಗ್ಗೆ ಅನುಭವದ ಬಗ್ಗೆ) ಆಯ್ಕೆ ಸಮಿತಿಯು ನೀಡಿದ್ದ ಗರಿಷ್ಠ ಅಂಕಗಳ ಅನುಸಾರ ಇತರೆ ಅಭ್ಯರ್ಥಿಗಳಿಗೆ ಇರುವ ಗರಿಷ್ಠ ವಯಸ್ಸಿನ ವಯೋಮಿತಿಗೊಳಗಿದ್ದ (ಮೀಸಲಾತಿ, ವರ್ಗೀಕರಣದ

ಆಧಾರದ ಮೇಲೆ ಬ್ಯಾಕ್‌ಲಾಗ್ ಹುದ್ದೆಗಳನ್ನು) ಈ ಕೆಳಕಾಣಿಸಿದ ಅಭ್ಯರ್ಥಿಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಡಿಕೇರಿ ವಿಭಾಗ, ಮಡಿಕೇರಿ ಇವರ ವರದಿಯನ್ನಾಧರಿಸಿಕೊಂಡು ಅಂತಿಮವಾಗಿ ಈ ಕೆಳಗಿನ 06 ಅಭ್ಯರ್ಥಿಗಳನ್ನು ಅರ್ಹ ಅಭ್ಯರ್ಥಿಗಳೆಂದು ಪರಿಗಣಿಸಲಾಗಿದೆ.

| ಕ್ರ. ಸಂ. | ಅಭ್ಯರ್ಥಿಯ ಹೆಸರು ಶ್ರೀ / ಶ್ರೀಮತಿ | ಜನ್ಮ ದಿನಾಂಕ | ಮೀಸಲಾತಿ (1) | ಮೀಸಲಾತಿ (2) | ನೇಮಕಾತಿ ಪ್ರಕ್ರಿಯೆಯಲ್ಲಿ ಗಳಿಸಿದ ಒಟ್ಟು ಅಂಕ |
|---|---|---|---|---|---|
| 1 | ಶರತ್‌ಕುಮಾರ್ ಹೆಚ್.ಟಿ. | 28.12.1996 | ಎಸ್.ಸಿ. | | 96 |
| 2 | ನವೀನ್ ಪಿ.ಬಿ. | 28.10.1995 | ಎಸ್.ಸಿ. ಗ್ರಾಮೀಣ | | 96 |
| 3 | ಭರತ್‌ನಾಯಕ್ ಕೆ. | 08.05.1999 | ಎಸ್.ಸಿ. | | 95 |
| 4 | ಸತೀಶ್ ಬಿ.ಆರ್. | 05.06.1984 | ಪ್ರವರ್ಗ 2ಎ | | 96 |
| 5 | ಅಭಿಲಾಷ್ ವಿ. | 21.05.1996 | ಪ್ರವರ್ಗ 2ಎ | | 87 |
| 6 | ಪೊನ್ನಪ್ಪ ಎ.ಎನ್. | 17.07.1991 | ಪ್ರವರ್ಗ 3ಎ | | 96 |

ಈ ಸಾಲಿನಲ್ಲಿ ಪ್ರವರ್ಗ – III B ಯಲ್ಲಿ ಅರ್ಹ ಅಭ್ಯರ್ಥಿಗಳು ದೊರೆಯದೆ ಇರುವುದರಿಂದ (ಆನೆ ಕಾವಾಡಿಗ ನೇರ ನೇಮಕಾತಿಯಲ್ಲಿನ ಷರತ್ತಿನ ಅನ್ವಯ) ಈ ಹುದ್ದೆಯನ್ನು ಬ್ಯಾಕ್‌ಲಾಗ್ ಹುದ್ದೆ ಎಂದು ಪರಿಗಣಿಸಲಾಗಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಅಂಶಗಳ ಹಿನ್ನೆಲೆಯಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ಇವರ ಆದೇಶದಂತೆ 07 ಆನೆ ಕಾವಾಡಿಗ ಹುದ್ದೆಗಳ ಪೈಕಿ 06 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಆಯ್ಕೆ ಮಾಡಿದ್ದು ಸದರಿ **ಈ ಮೇಲ್ಕಂಡ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಘಟಕಾಧಿಕಾರಿಗಳು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮುಂದಿನ ನೇಮಕಾತಿ ಆದೇಶವನ್ನು ನೀಡುವಂತೆ** ಈ ಮೂಲಕ ಆದೇಶಿಸಿದೆ.

**ಷರತ್ತುಗಳು :**

1. ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) ತಿದ್ದುಪಡಿ ನಿಯಮಗಳು 2003 ರಂತೆ 2 ವರ್ಷಗಳ ಪರೀಕ್ಷಾರ್ಥ ಅವಧಿ ಹೊಂದಿರತಕ್ಕದ್ದು.
2. ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳು 1977 ರ ನಿಯಮ 3 ರಂತೆ ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವಾಗಿ ಪೂರೈಸಬೇಕು.
3. ಪರೀಕ್ಷಾರ್ಥ ಅವಧಿಯಲ್ಲಿ ಅಭ್ಯರ್ಥಿಯ ಸೇವೆಯು ತೃಪ್ತಿಕರವಾಗಿಲ್ಲವೆಂದು ಕಂಡುಬಂದಲ್ಲಿ ಅಭ್ಯರ್ಥಿಯನ್ನು ಸೇವೆಯಿಂದ ತೆಗೆದು ಹಾಕಲಾಗುವುದು.
4. ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿಎಸ್‌ಪಿಎಲ್–04/ಸಿಇಡಿ/2005 ದಿನಾಂಕ 31.03.2016 ರಂತೆ ಅಂಶದಾಯಿ ನಿವೃತ್ತಿ ಯೋಜನೆಗೆ ಬದ್ಧರಾಗಿರತಕ್ಕದ್ದು.
5. ಅಭ್ಯರ್ಥಿಯು ಸಮಾಜಘಾತುಕ ಕೃತ್ಯಗಳಲ್ಲಿ ತೊಡಗಿಲ್ಲದೇ ಇರುವ ಬಗ್ಗೆ ಅಥವಾ ಅಪರಾಧೀಕರಣ ವ್ಯವಹಾರಗಳಲ್ಲಿ ಒಳಗಾಗದೇ ಇರುವ ಬಗ್ಗೆ ಸಂಬಂಧಿಸಿದ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಂದ ಪರಿಶೀಲನಾ ವರದಿಯನ್ನು ಪಡೆದುಕೊಳ್ಳುವುದು. ಈ ವರದಿಯನ್ನು ಪಡೆದುಕೊಳ್ಳಲು ಸಂಬಂಧಿಸಿದ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ನಿಮ್ಮ ಕಛೇರಿಯಿಂದ ಕೂಡಲೇ ಪತ್ರವನ್ನು ಕಳುಹಿಸುವುದು.
6. ಸಂಬಂಧಪಟ್ಟ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಇವರಿಂದ ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರದ ಬಗ್ಗೆ ಸತ್ಯಾಪನೆ ವರದಿಯನ್ನು ತರಿಸುವುದು.
7. ಅಭ್ಯರ್ಥಿಯು ತಾನು ಪೋಲಿಸ್ ಇಲಾಖೆಯಿಂದ ನೀಡಲ್ಪಡುವ ವರದಿಯಲ್ಲಿ ಯಾವುದೇ ವ್ಯತಿರಿಕ್ತ ಷರಾ ಇದ್ದಲ್ಲಿ ಹಾಗೂ ಜಾತಿ ಸಿಂಧುತ್ವದ ಬಗ್ಗೆಯೂ ನೀಡಲ್ಪಡುವ ವರದಿಯಲ್ಲಿ ಯಾವುದೇ ವ್ಯತಿರಿಕ್ತ ಷರಾ ಇದ್ದಲ್ಲಿ ತನ್ನ ನೇಮಕಾತಿ ಕುರಿತು ಯಾವುದೇ ಮುನ್ಸೂಚನೆ ಇಲ್ಲದೇ ಈಗಾಗಲೇ

ನೀಡಲಾಗಿರುವ ಆದೇಶವನ್ನು ರದ್ದುಪಡಿಸಿ ಸೇವೆಯಿಂದ ವಜಾಗೊಳಿಸುವ ಪೂರ್ಣ ಹಕ್ಕನ್ನು ಇಲಾಖೆ ಹೊಂದಿರುವ ಬಗ್ಗೆ ತನ್ನ ಪೂರ್ಣ ಸಮ್ಮತಿ ಇದೆಯೆಂದು ಅಭ್ಯರ್ಥಿಯಿಂದ ಲಿಖಿತ ರೂಪದಲ್ಲಿ ರೂ. 100/- ರ ಛಾಪಾ ಕಾಗದಲ್ಲಿ ಬರೆಸಿಕೊಳ್ಳುವುದು.

8. ಒಂದು ವೇಳೆ ಅಭ್ಯರ್ಥಿ ಮಾಜಿ ಸೈನಿಕನಾಗಿದ್ದಲ್ಲಿ, ಈ ಮೇಲ್ಕಂಡ ಷರತ್ತಿನೊಂದಿಗೆ ಮಾಜಿ ಸೈನಿಕ ಪ್ರವರ್ಗದಡಿಯಲ್ಲಿ ರಾಜ್ಯ ಸರ್ಕಾರಿ ಸೇವೆಗೆ ಅರ್ಹರೇ ಎಂಬುದನ್ನು ಸಂಬಂಧಪಟ್ಟ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಇವರು ನೀಡುವ ವರದಿಯಲ್ಲಿ ವ್ಯತಿರಿಕ್ತ ಷರಾ ಇದ್ದಲ್ಲಿ ತನ್ನನ್ನು ಯಾವುದೇ ಮುನ್ಸೂಚನೆ ಇಲ್ಲದೇ ನೇಮಕಾತಿ ಆದೇಶವನ್ನು ರದ್ದುಪಡಿಸುವ ಪೂರ್ಣ ಹಕ್ಕನ್ನು ಇಲಾಖೆ ಹೊಂದಿರುವ ಬಗ್ಗೆ ತನ್ನ ಪೂರ್ಣ ಸಮ್ಮತಿ ಇದೆಯೆಂದು ಲಿಖಿತ ರೂಪದಲ್ಲಿ ಬರೆಸಿಕೊಳ್ಳುವುದು.

**ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಆಯ್ಕೆ ಪ್ರಾಧಿಕಾರ**
**ಆನೆ ಕಾವಾಡಿಗಳ ನೇರ ನೇಮಕಾತಿ ಪ್ರಕ್ರಿಯೆ**
**ಕೊಡಗು ವೃತ್ತ, ಮಡಿಕೇರಿ**

ಪ್ರತಿಯನ್ನು :

1. ಗೌರವಗಳೊಂದಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಅರಣ್ಯ ಭವನ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಗೌರವಗಳೊಂದಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ) ಅರಣ್ಯ ಭವನ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಗೌರವಗಳೊಂದಿಗೆ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಸಿಬ್ಬಂದಿ ಮತ್ತು ನೇಮಕಾತಿ) ಅರಣ್ಯ ಭವನ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಶುಭಾಷಯಗಳೊಂದಿಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಆನೆ ಯೋಜನೆ) ಅರಣ್ಯ ಭವನ ಮೈಸೂರು / ಚಾಮರಾಜನಗರ / ಶಿವಮೊಗ್ಗ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಡಿಕೇರಿ ವಿಭಾಗ, ಮಡಿಕೇರಿ ಇವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ. 37 ಮೂಲ ಕಡತದೊಂದಿಗೆ [illegible].
6. ಕಛೇರಿ ಕಡತಕ್ಕೆ.
7. ಸೂಚನಾ ಫಲಕಕ್ಕೆ.